O.S. NO. 83/2012

DW - 2 .

Dated 18-07-2026.

ಸಾಕ್ಷಿಯನ್ನು ಈ ದಿನ ದಿನಾಂಕ 18-07-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .

ಪಾಟಿ ಸವಾಲುಃ ವಾದಿಯರ ಪರವಾಗಿ ಶ್ರೀ ಎಮ್ ಸಿ ಪಿ ವಕೀಲರಿಂದಃ

ನನ್ನ ಸಾಕ್ಷಿ ಪ್ರಮಾಣ ಪತ್ರ ಪ್ಯಾರಾ 3 ರಲ್ಲಿ ಹೇಳಿರುವಂತೆ ವಾದ ಪತ್ರದ ಪ್ಯಾರಾ 1 ಮತ್ತು 2 ರಲ್ಲಿಯ ಯಾವ ಸಂಗತಿಗಳು ಸರಿ ಇರುತ್ತವೆ ಅಥವಾ ಯಾವ ಸಂಗತಿಗಳು ಸರಿ ಇರುವುದಿಲ್ಲ ಎಂದು ಹೇಳುತ್ತಿರಾ ಎಂದರೆ ಸಾಕ್ಷಿ ಸದರಿ ಪ್ಯಾರಾಗಳಲ್ಲಿ ಬಹಳ ಸಂಗತಿಗಳು ಇರುತ್ತವೆ ಹೀಗಾಗಿ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ಅದೇ ರೀತಿ ವಾದ ಪತ್ರದ ಪ್ಯಾರಾ 3 ಮತ್ತು 4 ರಲ್ಲಿ ಇರುವ ಯಾವ ಸಂಗತಿಗಳು ಸರಿ ಮತ್ತು ತಪ್ಪು ಇರುತ್ತವೆ ಎಂದು ಹೇಳಲು ಬರುತ್ತಾ ಎಂದರೆ ಇಲ್ಲ. ಅದೇ ರೀತಿ ವಾದ ಪತ್ರದ ಪ್ಯಾರಾ ನಂ. 5 ರಲ್ಲಿ ಇರುವ ಯಾವ ಸಂಗತಿಗಳು ಸರಿ ಇಲ್ಲ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿ ನನಗೆ ನೆನಪಿಸಿದರೆ ಹೇಳಬಲ್ಲೆ ಎಂದು ನುಡಿದಿರುತ್ತಾರೆ. ಅದೇ ರೀತಿ ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರ ದಲ್ಲಿ ಹೇಳಿರುವಂತೆ ವಾದ ಪತ್ರದ ಪ್ಯಾರಾ ನಂ. 7 ರಿಂದ 12 ರಲ್ಲಿ ಯಾವ ಸಂಗತಿಗಳು ಸರಿ ಮತ್ತು ತಪ್ಪು ಇವೆ ಎಂದು ಹೇಳಲು ಬರುತ್ತಾ ಎಂದರೆ ವಾದ ಪತ್ರ ಓದದೇ ಹೇಳಲು ಬರುವುದಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕ 06-09-2025 ರಂದು ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರ ಬರೆಸಲು ನನ್ನ ವಕೀಲರಿಗೆ ನಾನೇ

ಸಂಕ್ಷಿಪ್ತ ಮಾಡಿ ಮಾಹಿತಿ ನೀಡಿದ್ದೇನೆ. ನನ್ನ ಹೇಳಿಕೆ ಪ್ರಕಾರ ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರ ತಯಾರಿಸಿರುತ್ತಾರೆ. ನನ್ನ ಪ್ರತಿವಾದ ಪತ್ರದ ಆಧಾರದ ಮೇಲೆ ಮಾತ್ರ ನನ್ನ ಮುಖ್ಯ ವಿಚಾರಣೆಯ ಸಾಕ್ಷಿ ಪ್ರಮಾಣ ಪತ್ರ ತಯಾರಿಸಿದ್ದಾರೆ ಎಂದರೆ ಸರಿಯಲ್ಲ.

ನನ್ನ ತಂದೆಯ ತಂದೆ ಹೆಸರು ಕಲ್ಲಪ್ಪ. ಅವರಿಗೆ ಇಬ್ಬರು ಗಂಡು ಮಕ್ಕಳು ಒಬ್ಬಳು ಹೆಣ್ಣು ಮಗಳು ಹಿಗೆ 3 ಜನ ಮಕ್ಕಳು. ಅವರು ಮೂಲತಃ ದೇವಲಾಪೂರ ಗ್ರಾಮದವರು ಇರುತ್ತಾರೆ. ಸದರಿ ಕಲ್ಲಪ್ಪ ರವರು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ಅವರಿಗೆ ದೇವಲಾಪೂರ ಗ್ರಾಮದಲ್ಲಿ ಹೊಲ ಮತ್ತು ಮನೆ ಆಸ್ತಿಗಳು ಇದ್ದವು. ಅವರಿಗೆ ಸದರಿ ಮನೆ ಮತ್ತು ಹೊಲ ಆಸ್ತಿಗಳು ಪಿತ್ರಾರ್ಜಿತ ವಾಗಿ ಬಂದಿರುವ ಆಸ್ತಿಗಳು ಇರುತ್ತವೆ. ಸದರಿ ಕಲ್ಲಪ್ಪ ಮತ್ತು ಆತನ ಮಕ್ಕಳು 1955 ರ ವರೆಗೆ ಒಟ್ಟು ಕುಟುಂಬದಲ್ಲಿ ಇದ್ದರು ಎಂದರೆ ಸರಿಯಲ್ಲ. 1955 ರಲ್ಲಿ ಸದರಿ ಕಲ್ಲಪ್ಪ ಒಟ್ಟು ಕುಟುಂಬದ ಆಸ್ತಿಗಳನ್ನು 3 ಪಾಲು ಭಾಗಗಳನ್ನಾಗಿ ವಿಭಾಗಿಸಿದರು ಎಂದರೆ ನಿಜ. ಆ ಕುರಿತು ದೇವಲಾಪೂರ ಗ್ರಾಮ ಡೈರಿ ನಂ. 1999 ಮಂಜೂರಾಯಿತು ಎಂದರೆ ನಿಜ. ನನ್ನ ಕಾಕಾ ನೇಮಿಚಂದ್ರ ರವರು ಸದರಿ ಪಾಲು ವಿಬಾಗದಲ್ಲಿ ತನ್ನ ಪಾಲಿಗೆ ಬಂದ ಆಸ್ತಿಗಳನ್ನು ಮಾರಾಟ ಮಾಡಿ ಬೆಳಗಾವಿಗೆ ಹೊಗಿ ವಾಸವಾದರು ಎಂದರೆ ನಿಜ. ಸದರಿ ಪಾಲು ವಿಬಾಗದಲ್ಲಿ ಕಲ್ಲಪ್ಪನ ಹಿಸ್ಸೆಗೆ 13 ಎಕರೆ ಆಸ್ತಿ ಬಂದಿತ್ತು ಎಂದರೆ ನಿಜ. ಸದರಿ ವಾಟ್ನಿ ಕಾಲಕ್ಕೆ ಬೈಲಹೊಂಗಲದಲ್ಲಿ ಅವರಿಗೆ ಸೇರಿಸಿದ ಔಷದ ಅಂಗಡಿ ಚಾಲ್ತಿಯಲ್ಲಿ ಇತ್ತು ಎಂದರೆ ಸಾಕ್ಷಿ ನಮ್ಮ ತಂದೆಯವರು ಸ್ವಂತ ಮಾಡಿದ ಔಷದ ಅಂಗಡಿ ಇತ್ತು ಎಂದು ನುಡಿದಿರುತ್ತಾರೆ. ನನ್ನ ಅಜ್ಜ ಕಲ್ಲಪ್ಪ ತನ್ನ ಜೀವಿತ ಅವದಿಯಲ್ಲಿ ತನ್ನ

ಹಿಸ್ಸೆಗೆ ಬಂದ 13 ಎಕರೆ ಆಸ್ತಿಯನ್ನು ನನ್ನ ತಂದೆಗೆ ಬಕ್ಷಿಸ ಮಾಡಿದರು ಎಂದರೆ ನಿಜ. ಸದರಿ ಬಕ್ಷಿಸ ಪತ್ರ ನನ್ನ ತಂದೆ ಹೆಸರಿಗೆ ನೊಂದ ಆಗಿರುತ್ತದೆ ಎಂದರೆ ನಿಜ. ಅದು ಈಗ ತೊರಿಸಿದ ನಿಪಿ – 10 ಇರುತ್ತದೆ ಎಂದರೆ ನಿಜ. ಪಾಲು ವಿಭಾಗದಲ್ಲಿ ನನ್ನ ತಂದೆ ಹಿಸ್ಸೆಗೆ ಬಂದಿರುವ ಆಸ್ತಿ ಮತ್ತು ನನ್ನ ಅಜ್ಜ ನನ್ನ ತಂದೆಗೆ ಬಕ್ಷಿಸ ಮಾಡಿದ ಆಸ್ತಿ ಹಾಗೂ ಬೈಲಹೊಂಗಲದಲ್ಲಿ ಇದ್ದ ಔಷದ ಅಂಗಡಿ ನನ್ನ ಅಜ್ಜನಿಂದ ನನ್ನ ತಂದೆಗೆ ಫ್ರಾಪ್ತವಾದ ಆಸ್ತಿಗಳು ಇರುತ್ತವೆ ಎಂದರೆ ಬೈಲಹೊಂಗಲದ ಯಾವುದು ಆಸ್ತಿಗಳು ನನ್ನ ಅಜ್ಜನಿಂದ ಫ್ರಾಪ್ತ ಆಗಿರುವ ಆಸ್ತಿಗಳು ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜನ ಹಯಾತಿ ಕಾಲದಲ್ಲಿ ಬೈಲಹೊಂಗಲ ದಲ್ಲಿ ಆತನಿಗೆ ಸೇರಿದ ಯಾವುದೇ ಸ್ಥಾವರ ಆಸ್ತಿಗಳು ಇರಲಿಲ್ಲ ಎಂದರೆ ಸರಿ.

ನನ್ನ ಅಜ್ಜ ತನ್ನ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ದೇವಲಾಪೂರದ ಪಿತ್ರಾರ್ಜಿತ ಆಸ್ತಿಗಳನ್ನು ಸಾಗುವಳಿ ಮಾಡುತ್ತಾ ಒಳ್ಳೆಯ ಆರ್ಥಿಕ ಸ್ಥಿತವಂತವಾಗಿದ್ದರು ಎಂದರೆ ನಿಜ. ಹಿಗಾಗಿ ನನ್ನ ಅಜ್ಜ ತನ್ನ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಸಿದ್ದರು ಎಂದರೆ ನಿಜ. ನನ್ನ ತಂದೆ ಎಲ್ ಎಲ್ ಬಿ ಪದವಿಧರರಾಗಿದ್ದರು, ನನ್ನ ಕಾಕಾ ಬಿ ಎ, ಬಿ ಎಡ್ ಮುಗಿಸಿ ಶಿಕ್ಷಣ ಇಲಾಖೆಯಲ್ಲಿ ನೌಕರಿ ಮಾಡುತ್ತಿದ್ದರು. ನನ್ನ ತಂದೆ 1934 ರಿಂದ ವಕೀಲಕಿ ವೃತ್ತಿಯನ್ನು ಫ್ರಾರಂಬಿಸಿದರು. ಅವರು ಒಳ್ಳೆಯ ಸ್ವಬಾವದ ಫ್ರಾಮಾಣಿಕ ವ್ಯಕ್ತಿ ಇದ್ದರು, ಅವರು ಯಾವತ್ತು ಸತ್ಯವನ್ನೆ ನುಡಿಯುವಂತವರು ಇದ್ದರು. ಹೀಗಾಗಿ ನನ್ನ ತಂದೆ ಫ್ರಾಮಾಣಿಕ ಸ್ವಬಾವದವರು ಇದ್ದುದರಿಂದ ವಕೀಲ ವೃತ್ತಿಯಲ್ಲಿ ಮುಂದುವರೆಯಲು

O.S. NO. 83/2012

DW - 2 .

Dated 18-07-2026.

ಆಗಿರಲಿಲ್ಲ ಎಂದರೆ ನಿಜ. ಅವರು ಗೌರವಾನ್ವಿತ ನ್ಯಾಯಾಧೀಶರಾಗಿ ನೇಮಕಗೊಂಡು ಕರ್ತವ್ಯ ನಿರ್ವಹಿಸಿರುತ್ತಾರೆ ಎಂದರೆ ಸರಿ. ನನ್ನ ತಂದೆ ವಕೀಲ ವೃತ್ತಿಯಲ್ಲಿ ಮುಂದುವರೆಯದ ಕಾರಣ ಕುಟುಂಬದ ವ್ಯಾಪಾರದಲ್ಲಿ ಅವರನ್ನು ನನ್ನ ತಂದೆಗೆ ತೊಡಗಿಸಿ ಕೊಳ್ಳಬೇಕೆಂದು ನನ್ನ ಅಜ್ಜ ಅವರಿಗೆ ಪ್ರೊತ್ಸಾಹಿಸುತ್ತಿದ್ದರು ಎಂದರೆ ಸರಿಯಲ್ಲ. ಹೀಗಾಗಿ ನನ್ನ ತಂದೆ ನನ್ನ ಅಜ್ಜನ ಆರ್ಥಿಕ ಸಹಾಯದಿಂದ 1943 ರಲ್ಲಿ ಬೈಲಹೊಂಗಲ ದಲ್ಲಿ ಔಷದ ಅಂಗಡಿ ತೆರೆದು ವ್ಯಾಪಾರ ಮಾಡಲು ಪ್ರಾರಂಬಿಸಿದರು ಎಂದರೆ ಸರಿಯಲ್ಲ. ನನ್ನ ತಂದೆ ತಮ್ಮ ವಕೀಲ ವೃತ್ತಿಯನ್ನು 1946 ರಲ್ಲಿ ಸ್ಥಗಿತಗೊಳಿಸಿದರು.

ನನ್ನ ಜನ್ಮ ಇಸ್ವಿ 1948 ಇರುತ್ತದೆ. 3 ನೇ ಪ್ರತಿವಾದಿ ನನ್ನ ಹಿರಿಯ ಸಹೊದರಿ ಎಂದರೆ ನಿಜ. ಅವರು ನನಕ್ಕಿಂತ 17 ವರ್ಷ ದೊಡ್ಡವಳು ಇರುತ್ತಾಳೆ. 4 ನೇ ಪ್ರತಿವಾದಿ ಸಹ ನನಕ್ಕಿಂತ 10-12 ವರ್ಷ ದೊಡ್ಡವಳು ಇರುತ್ತಾಳೆ. 1 ನೇ ವಾದಿ ನನಗಿಂತ 10 ವರ್ಷ ದೊಡ್ಡವರು ಇರುತ್ತಾರೆ. 2 ನೇ ವಾದಿ ನನಗಿಂತ 4 ವರ್ಷ ದೊಡ್ಡವರು ಇರುತ್ತಾರೆ. 2 ನೇ ಪ್ರತಿವಾದಿ ನನಗಿಂತ 3 ವರ್ಷ ಚಿಕ್ಕವನು ಇರುತ್ತಾನೆ. ನನ್ನ ತಂದೆಗೆ ನಾವು 4 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಹೀಗೆ 6 ಜನ ಮಕ್ಕಳು ಇರುವ ದೊಡ್ಡ ಕುಟುಂಬ ಎಂದರೆ ನಿಜ. ನನ್ನ ತಂದೆ ನಮ್ಮ ಕುಟುಂಬದ ನಿರ್ವಹಣೆಯನ್ನು ತನ್ನ ಔಷದ ಅಂಗಡಿಯ ಉತ್ಪನದಿಂದ ಮಾಡುತ್ತಿದ್ದರು. ಅವರು ತನ್ನ ಕುಟುಂಬ ನಿರ್ವಹಣೆಗೊಸ್ಕರ ದೇವಲಾಪೂರ ಗ್ರಾಮದ ಆಸ್ತಿಗಳ ಉತ್ಪನಗಳನ್ನು ಉಪಯೊಗಿಸುತ್ತಿರಲಿಲ್ಲ. ಅದಕ್ಕೆ ಏನು ಕಾರಣ ಎಂದರೆ

ಸಾಕ್ಷಿ ನನ್ನ ಅಜ್ಜ ಸದರಿ ಆಸ್ತಿಗಳ ಉತ್ಪನ್ನ ಅವರೇ ಇಟ್ಟುಕೊಳ್ಳುತ್ತಿದ್ದರು ಎಂದು ನುಡಿದಿರುತ್ತಾರೆ. ನನ್ನ ಅಜ್ಜನ ಹಯಾತಿ ಕಾಲದಲ್ಲಿ ನನ್ನ ಅಜ್ಜ ನನ್ನ ತಂದೆ ಜೊತೆಯಲ್ಲಿ ಇದ್ದರು ಎಂದರೆ ನಿಜ. ಹೀಗಾಗಿ ಪಿತ್ರಾರ್ಜಿತ ಆಸ್ತಿಗಳ ಉತ್ಪನಗಳ್ಳು ಕುಟುಂಬ ನಿರ್ವಹಣೆ ನನ್ನ ತಂದೆ ಉಪಯೊಗಿಸುತ್ತಿರಲಿಲ್ಲ ಎನ್ನುವುದು ಸುಳ್ಳು ಎಂದರೆ ಸರಿಯಲ್ಲ. ಆಗಿನ ಕಾಲಕ್ಕೆ ಔಷದ ಅಂಗಡಿಯಿಂದ ಎಷ್ಟು ಉತ್ಪನ್ನ ಬರುತ್ತಿತ್ತು ಎಂದು ನನಗೆ ಹೇಳಲು ಬರುತ್ತಾ ಎಂದರೆ ಇಲ್ಲ.

ನನ್ನ ತಂದೆಯ ಹಯಾತಿ ಕಾಲದಲ್ಲಿ ನಾವು ವಾದಿಯರು ಮತ್ತು 1 ರಿಂದ 4 ನೇ ಪ್ರತಿವಾದಿಗಳ ಸದಸ್ಯರು ಇರುವ ಏಕತರ ಕುಟುಂಬ ಇತ್ತು ಎಂದರೆ ನಿಜ. ಹೀಗಾಗಿ ಸದರಿ ಕುಟುಂಬದ ಎಲ್ಲ ಆಸ್ತಿಗಳನ್ನು ಏಕತರ ಕುಟುಂಬದ ಆಸ್ತಿಗಳು ಅಂತಾ ಪರಿಗಣಿಸಿದ್ದರು ಎಂದರೆ ಸರಿ. ಸದರಿ ಏಕತರ ಕುಟುಂಬದ ಕರ್ತಾ ಅಂತಾ ನನ್ನ ತಂದೆಯವರೇ ಹಿರೇತನ ಮಾಡುತ್ತಿದ್ದರು ಎಂದರೆ ನಿಜ. ನನ್ನ ತಂದೆ ಏಕತರ ಕುಟುಂಬದ ಕರ್ತಾನಾಗಿ ತಮ್ಮ ಕರ್ತವ್ಯವನ್ನು ಪ್ರಮಾಣಿಕವಾಗಿ ನಿರ್ವಹಿಸಿದ್ದಾರೆ ಎಂದರೆ ನಿಜ. ನನ್ನ ತಂದೆ ಏಕತರ ಕುಟುಂಬದ ಕರ್ತಾನಾತೆಯಿಂದ 1 ನೇ ವಾದಿಯನ್ನು ಹೊರತು ಪಡಿಸಿ ಉಳಿದ ಎಲ್ಲ ತನ್ನ ಮಕ್ಕಳ ಮದುವೆ ಮಾಡಿರುತ್ತಾರೆ ಎಂದರೆ ನಿಜ. 2 ನೇ ಪ್ರತಿವಾದಿಯ ಶಿಕ್ಷಣ ಎಸ್ ಎಸ್ ಎಲ್ ಸಿ ವರೆಗೆ ಆಗಿರುತ್ತದೆ. ನಾನು ಮತ್ತು 2 ನೇ ವಾದಿ ಜಾನರಿದ್ದು ನಾನು ಬಿ ಎಸ್ ಸಿ ಪದವಿ ಮುಗಿಸಿದ್ದು, 2 ನೇ ವಾದಿ ಎಮ್ ಎಸ್ಸಿ ಪದವಿ ಮುಗಿಸಿದ್ದರು ಎಂದರೆ ನಿಜ. 2 ನೇ

O.S. NO. 83/2012

DW – 2 .

Dated 18–07–2026.

ಪ್ರತಿವಾದಿಗೆ ಉನ್ನತ ಶಿಕ್ಷಣ ಪಡೆಯಲು ಏಕೆ ಸಾಧ್ಯವಾಗಲಿಲ್ಲ ಎಂದರೆ ಸಾಕ್ಷಿ ಅವರಿಗೆ ಶಿಕ್ಷಣ ಕಲಿಯುವುದರಿಂದ ಆಸಕ್ತಿ ಇರಲಿಲ್ಲ ಎಂದು ನುಡಿದಿರುತ್ತಾರೆ. ಅವರು ತನ್ನ ಎಸ್ ಎಸ್ ಎಲ್ ಸಿ ಮುಗಿಸಿದ ತಕ್ಷಣ ನಮ್ಮ ಅಂಗಡಿಯಲ್ಲಿ ನನ್ನ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು. ನನ್ನ ತಂದೆ ಮೃತಪಟ್ಟ ನಂತರ 2 ನೇ ಪ್ರತಿವಾದಿಯನ್ನು ನಾನು ನನ್ನ ಅಂಗಡಿಯ ಪಾಲುದಾರನನ್ನಾಗಿ ಮಾಡಿಕೊಂಡಿದ್ದೇನೆ. ಅವರು 1967 ರಲ್ಲಿ ಎಸ್ ಎಸ್ ಎಲ್ ಸಿ ಮುಗಿಸಿರುತ್ತಾರೆ. ನನ್ನ ತಂದೆ ತನ್ನ ಮಕ್ಕಳಲ್ಲಿ ಒಬ್ಬರಿಗೆ ಹೆಚ್ಚು ಇನ್ನೊಬ್ಬರಿಗೆ ಕಡಿಮೆ ಅಂತಾ ಯಾವತ್ತು ಬೇದಬಾವ ಮಾಡಿದವರು ಅಲ್ಲ ಎಂದರೆ ನಿಜ. ನಾನು ಮತ್ತು ನನ್ನ ಸಹೋದರರು ನನ್ನ ತಂದೆಯ ಆಜ್ಞಾಧಾರಕ ಮಕ್ಕಳಾಗಿ ನನ್ನ ತಂದೆಯ ಮಾತುಗಳನ್ನು ಪಾಲಿಸಿಕೊಂಡು ಬಂದಿರುತ್ತೇವೆ ಎಂದರೆ ನಿಜ. ಹೀಗಾಗಿ ನನ್ನ ತಂದೆಯವರ ಒಟ್ಟು ಕುಟುಂಬ ಆದರ್ಶ ಕುಟುಂಬವಾಗಿ ಮುಂದುವರೆದುಕೊಂಡು ಬಂದಿತ್ತು ಎಂದರೆ ಸರಿ.

ದೇವಲಾಪುರ ಗ್ರಾಮದಲ್ಲಿ ನಮ್ಮ ಒಟ್ಟು ಕುಟುಂಬದ ಒಟ್ಟು ಆಸ್ತಿ 24 ಎಕರೆ ಇರುತ್ತದೆ. ದಾವಾ ಅನುಬಂದ ಕ ನೇದ್ದರಲ್ಲಿಯ ಅನುಕ್ರಮ ನಂ. 1 ಆಸ್ತಿಗಳಾದ ಪಂಚಾಯತಿ ವಿ ಪಿ ನಂ. 222/1 ಮತ್ತು 223/1 ಏಕತರ ಕುಟುಂಬದ ಆಸ್ತಿಗಳು ಇರುತ್ತವೆ ಎಂದರೆ ನಿಜ. ನನ್ನ ತಂದೆ ಒಟ್ಟು ಕಟುಂಬದ ಆಸ್ತಿಗಳ ಆದಾಯಿಂದ ಮೊದಲ ಬಾರಿಗೆ 1956 ರಲ್ಲಿ ಅನುಬಂದ ಕ ಅನುಕ್ರಮ ನಂ. 2 ಆಸ್ತಿಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿ ಖರೀದಿ ಮಾಡಲು ನನ್ನ ತಂದೆ ತನ್ನ ಸ್ವಂತ

O.S. NO. 83/2012
DW - 2 .
Dated 18-07-2026.

ಸಂಪಾದನೆಯಿಂದ ಕೂಡಿ ಇಟ್ಟ ಹಣ ಮತ್ತು ತನ್ನ ಸ್ನೇಹಿತರಿಂದ ಕೈಗಡ ಹಣ ಪಡೆದು ಖರೀದಿ ಮಾಡಿರುತ್ತಾರೆ. ಅದಕ್ಕೆನಾದರು ಪುರಾವೆಗಳು ಇವೆಯಾ ಎಂದರೆ ಸಾಕ್ಷಿ ಪುರಾವೆಗಳು ಇಲ್ಲ, ಮೂಟೇಶನಗಳು ಇರುತ್ತವೆ ಎಂದು ನುಡಿದಿರುತ್ತಾರೆ. ನನ್ನ ತಂದೆ 2 ನೇ ವಾದಿ ಹೆಸರಿಗೆ 1965 ರಲ್ಲಿ ಅನುಬಂಧ ಕ ನೇದ್ದರಲ್ಲಿಯ ಅನುಕ್ರಮ ನಂ. 3 ಆಸ್ತಿಯನ್ನು ಖರೀದಿ ಮಾಡಿದರು ಎಂದರೆ ಸರಿ. ಅದೇ ರೀತಿ 1970 ರಲ್ಲಿ ಅನುಬಂಧ ಕ ನೇದ್ದರಲ್ಲಿಯ ಅನುಕ್ರಮ ನಂ. 4 ಆಸ್ತಿಯನ್ನು ನನ್ನ ತಂದೆ ನನ್ನ ಮತ್ತು 2 ನೇ ಪ್ರತಿವಾದಿಯ ಹೆಸರಿಗೆ ಖರೀದಿ ಮಾಡಿದರು ಎಂದರೆ ಸರಿಯಲ್ಲ. ಸದರಿ ಅನುಬಂಧ ಕ ನೇದ್ದರಲ್ಲಿಯ ಅನುಕ್ರಮ ನಂ. 4 ಆಸ್ತಿಯ ಮನೆಯಲ್ಲಿ ನನ್ನ ತಂದೆ ತನ್ನ ಹಯಾತಿವರೆಗೆ ಅದೇ ಮನೆಯಲ್ಲಿ ವಾಸವಿದ್ದುಕೊಂಡು ಇದ್ದರು ಎಂದರೆ ಸರಿ.

(ಈ ಹಂತದಲ್ಲಿ ಮುಂದುವರೆದ ಪಾಟಿ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದುಡಲಾಯಿತು . )

(ಸಾಕ್ಷಿ ವಿಚಾರಣೆಯನ್ನು ನೆರವೇರಿಸಿದ್ದು , ಸಾಕ್ಷಿ ಹೇಳಿದ ಹೇಳಿಕೆಯನ್ನು ಬೆರಳಚ್ಚುಗಾರರಿಗೆ ಉಕ್ತ ಲೇಖನ ನೀಡಿ , ಅದನ್ನು ಗಣಕಿಕೃತಗೊಳಿಸಿದ ಮೇರೆಗೆ ದಾಖಲಿಸಲಾಯಿತು ).

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು
ಬೈಲಹೊಂಗಲ.